**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 336/2024
ಪಿಡಬ್ಲು :6 ಸಿಡಬ್ಲು :11

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀ. ಅಶೋಕ ಮಾದರ |
| ತಂದೆಯ ಹೆಸರು | : | ಶ್ರೀ. ನಾಗಪ್ಪ ಮಾದರ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಕೇಬಲ ಅಪರೇಟರ |
| ವಾಸ್ತವ್ಯ | : | ಮುನವಳ್ಳಿ , ತಾಲೂಕುಃ ಸವದತ್ತಿ |
| ದಿನಾಂಕ | : | 10-03-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

(1ನೇ ಆರೋಪಿ ಮತ್ತು 5ನೇ ಆರೋಪಿತರು ನ್ಯಾಯಾಂಗ ಬಂಧನದಲ್ಲಿದ್ದು ವಿಡಿಯೋ ಕಾನ್ಫರೆನ್ಸ ಮುಖಾಂತರ ಹಿಂಡಲಗಾ ಕಾರಾಗೃಹ, ಬೆಳಗಾವಿಯಿಂದ ವಿಚಾರಣೆಗೆ ಹಾಜರುಪಡಿಸಿಕೊಳ್ಳಲಾಯಿತು. ಆರೋಪಿಗೆ ನ್ಯಾಯಾಲಯದ ಚಿತ್ರಣ ಸ್ಪಷ್ಟವಾಗಿ ಕಾಣಿಸುತ್ತಿದೆಯೇ ಮತ್ತು ಧ್ವನಿ ಸ್ಪಷ್ಟವಾಗಿ ಕೇಳಿಸುತ್ತಿದೆಯೇ ಎಂದು ಆರೋಪಿತರಿಂದ ಖಾತರಿಪಡಿಸಿಕೊಂಡು ವಿಚಾರಣೆಯನ್ನು ವಿಡಿಯೋ ಕಾನ್ಫರೆನ್ಸ ಮುಖಾಂತರ ಆರೋಪಿತರ ಪರ ವಕೀಲರ ಮತ್ತು ಸರ್ಕಾರಿ ವಕೀಲರ ಸಮಕ್ಷಮ ತೆರೆದ ನ್ಯಾಯಾಲಯದಲ್ಲಿ ತೆಗೆದುಕೊಳ್ಳಲಾಯಿತು.)

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 9 ಯಲ್ಲಪ್ಪ ಭಜಂತ್ರಿ, ಚಾಸಾಃ 10 ಲಕ್ಷ್ಮಣ ನನಗೆ ಗೊತ್ತಿರುವುದಿಲ್ಲ . 1 ನೇ ಆರೋಪಿ ರಫೀಕ್ ಬೆಪಾರಿ ಗೊತ್ತಿರುವುದಿಲ್ಲ. ನನ್ನ ಬಳಿ Swift desire Car ಇದೆ. ಈಗ 6 ವರ್ಷಗಳ ಹಿಂದೆ ನಾನು ಅದನ್ನು ಖರೀದಿಸಿದ್ದೇನು. ಆ ಕಾರನ್ನು ನನ್ನ ತಮ್ಮ ಚಲಾಯಿಸುತ್ತಾನೆ. 2024 ರಲ್ಲಿ ಲಕ್ಷ್ಮಣ ಮಾದರ ಎನ್ನುವವರು ಕಾರನ್ನು

ಚಲಾಯಿಸುತ್ತಿದ್ದರು. ಚಾಸಾಃ 9 ಯಲ್ಲಪ್ಪ ರವರು ನನ್ನ ಕಾರನ್ನು ಬಾಡಿಗೆಗೆ ಎಂದು ಪಡೆದುಕೊಂಡಿರಲಿಲ್ಲ. ಆ ವಿಚಾರವಾಗಿ ಪೋಲಿಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ .

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ, ಸಾಕ್ಷಿಯ ಹೇಳಿಕೆಯನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು).**

**ಪಾಟೀ ಸವಾಲು : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 10 ಲಕ್ಷ್ಮಣ ಕಿಟದಾಳ ನನ್ನ ಕಾರಿನ ಚಾಲಕನಾಗಿ ಕೆಲಸ ಮಾಡುತ್ತಿದ್ದನು ಎನ್ನುವುದು ಸರಿಯಲ್ಲ. ಚಾಸಾಃ 10 ರವರು ದಿನಾಂಕಃ 15-04-2024 ರಂದು ಬೆಳಗಾವಿಗೆ ಬಾಡಿಗೆಗೆ ಹೋಗಿ ಬರುತ್ತೇನೆ ಎಂದು ಹೇಳಿದ್ದನು ಎನ್ನುವುದು ಸರಿಯಲ್ಲ. ನಾನು ಎಲ್ಲಿಗೆ ಬಾಡಿಗೆಗೆ ಕರೆದುಕೊಂಡು ಹೋಗುತ್ತಿಯಾ ಎಂದು ಕೇಳಿದ್ದಕ್ಕೆ ನಿನಗೆ ಯಾಕೆ ಬೇಕು ನಾನು ಬಾಡಿಗೆ ಇಸಿದು ಕೊಡುತ್ತೇನೆ ಎಂದು ಹೇಳಿದ್ದನು ಎನ್ನುವುದು ಸರಿಯಲ್ಲ. ನಾನು ಸಂಜೆ 05:00 ಗಂಟೆಗೆ ಆತನಿಗೆ ಫೋನ್ ಮಾಡಿ ಗಾಡಿ ಏಕೆ ಇನ್ನೂ ಬಂದಿಲ್ಲ ಎಂದು ಕೇಳಿದೇನು, ಆತ ಸಂಕೇಶ್ವರದಲ್ಲಿ ಇದ್ದೇನು ಎಂದು ಹೇಳಿದನು, ನಾನು ರಾತ್ರಿ 8:00 ಗಂಟೆಗೆ ಪುನಃ ಪೋನ ಮಾಡಿ ಕೇಳಿದಾಗ ನಾನು ಪೂನಾಗೆ ಹೊರಟಿದ್ದೇನೆ, ಎರಡು ದಿನ ಲೇಟ ಆಗುತ್ತದೆ ಎಂದು ಹೇಳಿದ್ದನು, ಭಜಂತ್ರಿ ಹುಡುಗಿ ಸಿಕ್ಕಿದ್ದಾಳೆ , ಆ ಕಾರಣ ದೇವರಿಗೆ ಹರಿಕೆ ತೀರಿಸಲು ಹೋಗುತ್ತಿದ್ದೇವೆ ಎಂದು ಹೇಳಿದನು ಎನ್ನುವುದು ಸರಿಯಲ್ಲ. ಎರಡು ದಿನ ನಂತರ ಬೆಳಗಿನ ಜಾವ 03:00 ಗಂಟೆಗೆ ಬಂದು ನನಗೆ ರೂ.2,000/- ಬಾಡಿಗೆ ಹಣ ನೀಡಿದ್ದನು ಎನ್ನುವುದು ಸರಿಯಲ್ಲ. ಅದಕ್ಕೂ ಮೊದಲು 1 ನೇ ಆರೋಪಿ ನಮ್ಮ ಮನೆಗೆ 4 ಜನರನ್ನು ಕಳುಹಿಸಿ ಸಿ.ಸಿ. ಕ್ಯಾಮರಾದಲ್ಲಿ ಸಿಕ್ಕಿದ ಕಾರು ನಿಮ್ಮದು ಎಂದು ಕೇಳಿದನು, ಅದನ್ನು ಯಾರು ತೆಗೆದುಕೊಂಡು

ಹೋಗಿದ್ದಾರೆಂದು ಕೇಳಲು ನಾನು ಲಕ್ಷ್ಮಣ ತೆಗೆದುಕೊಂಡು ಹೋಗಿದ್ದಾನೆ ಎಂದು ಹೇಳಿದೆನು, 1ನೇ ಆರೋಪಿ ಕಾರು ಗಾಡಿ ಹಿಡಿದುಕೊಡು ನಿನ್ನ ಗಾಡಿಗೆ ನಾನು ನೋಡಿಕೊಳ್ಳುತ್ತೇನೆ ಎಂದು ಮತ್ತು ಹೆಚ್ಚಿಗೆ ರೊಕ್ಕ ಕೊಡುತ್ತೇನೆ ಎಂದು ಹೇಳಿದ್ದನು ಎನ್ನುವುದು ಸರಿಯಲ್ಲ. ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಪಿ– 28 ಎಂದು ಗುರುತಿಸಲಾಯಿತು.

2. ನಾನು ನಿಪಿ– 28 ರಂತೆ ಹೇಳಿಕೆ ನೀಡಿದ್ದರೂ ಸಹ , ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀಮತಿ.ಎಸ್.ಬಿ.ಪಿ ವಕೀಲರ ಪರವಾಗಿ ಶ್ರೀಮತಿ.ಕೆ.ಎಲ್.ಎನ್ ವಕೀಲರಿಂದ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.